3) ಶುಲ್ಕ ವಿನಾಯಿತಿ.

4) ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್‌ನಂತರದ ಬಾಲಕ, ಬಾಲಕಿಯರ ವಿದ್ಯಾರ್ಥಿನಿಲಯಗಳು

5) ಕಾನೂನು ಪದವೀಧರರಿಗೆ ಶಿಷ್ಯವೇತನ.

ಮೇಲಿನ ಕಾರ್ಯಕ್ರಮಗಳ ಜೊತೆಗೆ ಅಲ್ಪಸಂಖ್ಯಾತರ ಅಭಿವೃದಿ ನಿಗಮದ ಕಾರ್ಯಕ್ರಮಗಳಾದ;

1) ಅಲ್ಪಸಂಖ್ಯಾತರ ಸಾಲದ ಯೋಜನೆ

2) ಅಲ್ಪಸಂಖ್ಯಾತರ ಮೋಟಾರ್ ಡ್ರೈವಿಂಗ್ ತರಬೇತಿ ಯೋಜನೆ.

3) ಅಲ್ಪಸಂಖ್ಯಾತರಿಗೆ ಡಿಪ್ಲೊಮೋ ಇನ್ ಪೋರ್‌ಮೆನ್ ಶಿಷ್ ತರಬೇತಿ ಕಾರ್ಯಕ್ರಮಗಳನ್ನು ಸಹ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅನುಷ್ಠಾನ ಗೊಳಿಸಲಾಗುತ್ತಿದೆ.

ವಿಷಯ : ವಿರಾಜಪೇಟೆ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ.

1416 (1899)-ಶ್ರೀ ಹೆಚ್. ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ನಗರಾಭಿವೃದ್ಧಿಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನಗರಾಭಿವೃದ್ಧಿ ಇಲಾಖೆ ವತಿಯಿಂದ ನಡೆಸುತ್ತಿರುವ ಜನಪರ ಕಾರ್ಯಕ್ರಮಗಳು ಯಾವುವು (ವಿವರ ನೀಡುವುದು)

ಆ) ವಿರಾಜಪೇಟೆ ನಗರದ ಜನರು ನೀರಿನ ಸಮಸ್ಯೆಯಿಂದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಈ ಸಮಸ್ಯೆ ನೀಗಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು?

ಇ) ವಿರಾಜಪೇಟೆ ನಗರಕ್ಕೆ ಬೇತ್ರಿಯ ಕಾವೇರಿ ನೀರು ಸರಬರಾಜು ಮಾಡಲು ಸರ್ಕಾರವು ಕ್ರಮ ಕೈಗೊಂಡಿದೆಯೇ ಹಾಗಿದ್ದಲ್ಲಿ ಈ ಯೋಜನೆಗೆ ಮೂಡುಪಾಗಿರುವ ಹಣವೆಷ್ಟು?

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು.)

ಅ) ನಗರಾಭಿವೃದ್ಧಿ ಇಲಾಖೆಯಿಂದ ನಡೆಸುತ್ತಿರುವ ಜನಪರ ಕಾರ್ಯಕ್ರಮಗಳಲ್ಲಿ ಮಂಡಲಿಯು ಕರ್ನಾಟಕ ನಗರ ಪ್ರದೇಶಗಳಿಗೆ ಕುಡಿಯುವ ಮತ್ತು ಒಳಚರಂಡಿ ಯೋಜನೆಗಳನ್ನು ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ಪಡೆದುಕೈಗೊಳ್ಳವುದಾಗಿದೆ.

ಆ) ಬಂದಿದೆ. ಈ ಪಟ್ಟಣಕ್ಕೆ ಬೇತ್ರಿ ಬಳಿಯಿಂದ ಕಾವೇರಿ ನದಿಯನ್ನು ಮೂಲವಾಗಿಟ್ಟುಕೊಂಡು ಯೋಜನೆಯನ್ನು ತಯಾರಿಸಲು ಸರ್ವೆ ಕಾರ್ಯವನ್ನು ಕೈಗೊಂಡಿದೆ.

ಇ) ಈ ಯೋಜನೆ ಬಗ್ಗೆ ಇನ್ನೂ ಸರ್ವೆ ನಡೆಯುತ್ತಿದ್ದು ಈ ಹಂತದಲ್ಲಿ ಹಣ ಮಂಜೂರಾತಿ ನೀಡಿಲ್ಲದಿರುವುದರಿಂದ ಈ ಹಂತದಲ್ಲಿ ಹಣ ಮಂಜೂರಾತಿ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ವಿರಾಜಪೇಟೆ ತಾಲ್ಲೂಕಿನಲ್ಲಿ ರೇಷ್ಮೆ ಉತ್ಪಾದನೆ ಬಗ್ಗೆ.

1417 (1898)-ಶ್ರೀ ಹೆಚ್. ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಲ್ಲಿ ರೇಷ್ಮೆ ಇಲಾಖಾವತಿಯಿಂದ ವಿವಿಧ ಯೋಜನೆಗಳನ್ವಯ ಫಲಾನುಭವಿಗಳಿಗೆ ವಿತರಿಸಲಾದ ಸೌಲಭ್ಯಗಳು ಯಾವುವು.

ಆ) ವಿರಾಜಪೇಟೆ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಲ್ಲಿ ಗೂಡಿನ ಉತ್ಪಾದನೆ ಎಷ್ಟು (ರೈತರ ವರ್ಗೀಕರಣದೊಂದಿಗೆ ವಿವರ ನೀಡುವುದು)

ಇ) ಬಹುತೇಕ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಹಳೆಯ ಮಾದರಿಯ ತೂಕದ ಯಂತ್ರಗಳಲ್ಲಿ ರೇಷ್ಮೆ ಗೂಡ ತೂಕಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಎಲೆಕ್ಟ್ರಾನಿಕ್ ತೂಕದ ಯಂತ್ರವನ್ನು ಅಳವಡಿಸುವಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವರದೇಗೌಡ (ರೇಷ್ಮೆ ಸಚಿವರು)

ಅ) ಅನುಬಂಧ-1ರಲ್ಲಿ ನೀಡಿದೆ.

ಆ) 1993 -1994 - 9,743 ಕೆ.ಜಿ
1994 - 1995 - 3,947 ಕೆ.ಜಿ
1995 - 1996 - 2,175 ಕೆ.ಜಿ
1996 - 1997 - (ಫೆಬ್ರವರಿ 97ರವರೆಗೆ 931 ಕೆ.ಜಿ)